ಮನುಷ್ಯ ಬದುಕು ಹಾಗೂ ಕಲೆಗೆ ಸಂಬಂಧಿಸಿದಂತೆ ಮೂಲಭೂತ ಪ್ರಶ್ನೆಗಳನ್ನು ಎತ್ತುವ aesthetic observationನ ಅತ್ಯುನ್ನತ ಸಂಯೋಜನೆಯಾಗಿದೆ. ನಿರಂತರವಾಗಿ ಚಲನೆಯಲ್ಲಿರುವ ಪ್ರತಿಮಾ ಲೋಕವಿದು. ಧ್ವನಿ, ಬೆಳಕು, ಸಂಗೀತ, ನಟನೆ ಹಾಗೂ ನಿರ್ದೇಶನ... ಎಲ್ಲದರ ಜುಗಲ್ ಬಂದಿಯು ಸಿನಿಮಾವನ್ನು ಸಮಕಾಲೀನತೆಯಿಂದ ಶಾಶ್ವತಕ್ಕೆ ಸಲ್ಲಬಲ್ಲ ಒಂದು ಉತ್ತಮ ಕಲಾಕೃತಿಯಾಗಿ ಮಾಡಬಲ್ಲದು. ನಾನು ನಿಮಗೆ 'ಒಂದು ಇಷ್ಟದ ಹಾಡು ಯಾವುದು' ಎಂದು ಕೇಳಿದರೆ ನೀವು ಹೇಳಬಹುದಾ? ಹೀಗಾಗಿ ಒಂದೆರಡು ಸಿನೆಮಾದ ಹೆಸರು ಹೇಳೋದು ಕಷ್ಟ.

◆ **'ಬಾಂಗ್ಲಾ ವಿಮೋಚನಾ ಹೋರಾಟ'ದ ಬಗ್ಗೆ ತಿಳಿಸಿ. ಧರ್ಮದ ಆಧಾರದ ಮೇಲೆ ನಿರ್ಮಾಣವಾದ ದೇಶ ಯಾಕೆ ಒಡೆಯಿತು?**

ಬೆಂಗಾಲಿ ನನ್ನ ತಾಯ್ನುಡಿ. ಮಾನವ ಇತಿಹಾಸದಲ್ಲಿ ಧರ್ಮಕ್ಕಿಂತಲೂ ಸಂಸ್ಕೃತಿಯ ಬೇರುಗಳು ಆಳ ಮತ್ತು ಅಗಲ. ಎಷ್ಟೋ ಸಲ ಒಂದು ಅಫಿಷಿಯಲ್ ಧರ್ಮದ ಆಚಾರವಿಚಾರಗಳನ್ನು ನಿಯಂತ್ರಿಸಿಬಿಡುವಷ್ಟು ಅವು ಪ್ರಭಾವಶಾಲಿಯಾಗಿರುತ್ತವೆ. ಹೀಗಾಗಿ ಪಾಕಿಸ್ತಾನದವರು ನಮ್ಮ ಮೇಲೆ ಹೇರಲು ನೋಡಿದ Cultural Hegemonyಯನ್ನು ನಮ್ಮವರು ಸಾರಾಸಗಟಾಗಿ ತಿರಸ್ಕರಿಸಿದರು. ನಮ್ಮ ಭಾಷೆ, ಆಹಾರ, ಉಡುಗೆ-ತೊಡುಗೆ, ಆಚಾರ- ವಿಚಾರಗಳನ್ನು ಕುರಿತು ಲೇವಡಿ ಮಾಡಿದರೆ ಹೇಗೆ ತಡೆದುಕೊಳ್ಳಲು ಸಾಧ್ಯ? ಇದು ಎಲ್ಲಾ ರೀತಿಯಿಂದಲೂ ಬಂಗಾಲಿಗಳನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ಮಾಡಿ ಅಧಿಕಾರ ಕೇಂದ್ರದಿಂದ ದೂರವಿಡುವ ಹುನ್ನಾರವಾಗಿತ್ತು. ಈ ಕಾರಣಕ್ಕಾಗೇ ಉರ್ದುವಿನ ಶ್ರೇಷ್ಠತೆಯನ್ನು ನಾವು ಅಲ್ಲಗಳೆದೆವು. ಬಾಂಗ್ಲಾ ವಿಮೋಚನೆಯ ಪಿತಾಮಹ ಮುಜಿಬುರ್ ರೆಹಮಾನರಿಗೆ ಒಂದು ಒಳನೋಟ ಇತ್ತು. ಅದು ಅವರ ಸಮಾಜವಾದಿ ಸಿದ್ಧಾಂತದಿಂದ ಬಂದಿದ್ದು. ಈಗ ಪರಿಸ್ಥಿತಿ ಹಾಗಿಲ್ಲ. ಕೈಮೀರಿ ಹೋಗುತ್ತಿದೆ ಆ ಮಾತು ಬೇರೆ. ಆದರೆ ನಮ್ಮಲ್ಲಿನ್ನೂ ಬಡವರ ಬಂಧು ಮೊಹಮ್ಮದ್ ಯುನೂಸ್ ಎಂಬ ಒಂದು ಆಶಾಕಿರಣವಿದೆ.

◆ **ಬಾಂಗ್ಲಾ ಸಂಸ್ಕೃತಿಯಲ್ಲಿ ಆಹಾರ ಮತ್ತು ಕೌಟುಂಬಿಕ ಆಚರಣೆಗಳು ಒಂದರೊಳಗೊಂದು ಹೇಗೆ ಹೆಣೆದುಕೊಂಡಿವೆ?**

ನಾವು ಈದ್‌ಮಿಲಾದ್-ಉನ್-ನಬಿ, ಶಬ್-ಇ-ಬರಾತ್ ಮುಂತಾದ ಧಾರ್ಮಿಕ ಹಬ್ಬಗಳನ್ನು ಆಚರಿಸುತ್ತೇವೆ. ಪೋಹೇಲಾ ಬೋಯಿಶಾಖ್ ಅಂದರೆ ಬೆಂಗಾಲಿ ಹೊಸ ವರ್ಷ ನಾವೆಲ್ಲರೂ ಆಚರಿಸುವ ಹಬ್ಬವಾಗಿದೆ. ಈ ಹಬ್ಬವನ್ನು ನಮ್ಮ ಬಾಂಗ್ಲಾ ಸಂಸ್ಕೃತಿಯ ಅಸ್ಮಿತೆ ಹಾಗೂ ನಮ್ಮ ಬಾಳಿನ ಸಾರ್ವತ್ರಿಕ ಆಚರಣೆ ಅನ್ನಬಹುದು. ಈ ಹಬ್ಬದ ಸಂದರ್ಭದಲ್ಲಿ ರಸ್ತೆಗಳು ಗಾಢ ಬಣ್ಣಗಳಿಂದ, ಬೆಂಗಾಲಿ ಹಾಡುಗಳಿಂದ ಮತ್ತು ಪಾಂತ ಇಲಿಶ್ ಖಾದ್ಯದ ಪರಿಚಿತ ವಾಸನೆಯಿಂದ ಕಳೆಗಟ್ಟಿ ನಿಂತಿರುತ್ತವೆ. ವೈಯಕ್ತಿಕವಾಗಿ ಹೇಳೋದಾದರೆ ಈ ಹಬ್ಬಗಳು ನಮಗೆ ಕೇವಲ ಆಚರಣೆಗಳಲ್ಲ. ಈದ್‌ನ ಬೆಳಗ್ಗೆ ನನ್ನ ತಾಯಿ, ಬಂಗಾಳಿ ಶೈಲಿಯ ಹೊಸ ದಡಿ ಸೀರೆ ಉಟ್ಟುಕೊಂಡು ಮಾಡುತ್ತಿದ್ದ ಖೀರಿನ ಪರಿಮಳದಲ್ಲಿ, ಅಂಗಳದಲ್ಲಿ ಮೊಳಗುವ ಹಬ್ಬಕ್ಕೆಂದು ಒಟ್ಟುಗೂಡಿದ ಕುಟುಂಬಸ್ಥರ ನಗುವಿನಲ್ಲಿ, ಪೋಹೇಲಾ ಬೊಯಿಶಾಖ್ ಆಚರಣೆಯ ಸಂದರ್ಭದಲ್ಲಿ ಬೀದಿಗಳಲ್ಲಿ ಕೇಳಿ ಬರುವ ಬಾವುಲ್ ಜಾನಪದ ಹಾಡುಗಳಲ್ಲಿ ನನಗೆ ಕಾವ್ಯ ಕಾಣುತ್ತದೆ.

◆ **ಆಕಸ್ಮಿಕವಾಗಿ ಹೊಳೆದ ಒಂದು ಸಣ್ಣ ರೂಪಕ – ಮತ್ತದರ ಎಳೆ ಹಿಡಿದುಕೊಂಡು,ಆ ಕವಿತೆಯ ತಾತ್ಕಾಲಿಕ ಕೊನೆಯ ಸಾಲು ಬರೆಯುವವರೆಗಿನ ನಿಮ್ಮ ಪಯಣ ಹೇಗಿರುತ್ತೆ?**

ನಾನು ಶಾಕಿರಾ ಎಷ್ಟೊಂದು ಉಪ ವ್ಯಕ್ತಿತ್ವಗಳಿಂದ ರೂಪುಗೊಂಡಿದ್ದೇನೆ. ಪ್ರೀತಿಯ ತುರ್ತು, ಅಗಲಿಕೆಯ ಭಯ, ಕ್ಷಣ ಭಂಗುರತೆಯ ಲಯ, ತಲೆಮಾರುಗಳ ನೆನಪಿನ ಗಾಯ, ಮನಮಗ್ನತೆ, ಸ್ವೋಪಜ್ಞತೆ, ಪ್ರಕ್ಷುಬ್ಧತೆ, ಅಸಹಜತೆ... ಅಥವಾ ಸಂಪೂರ್ಣ ಖಾಲಿತನದ ಸಮೀಕರಣ; ಬಹುಶಃ ಇವು ನನ್ನ ಸೃಷ್ಟಿಕ್ರಿಯೆಯ ಒಳದಾರಿಗಳಾಗಿರಬಹುದು.

ಕವಿತೆಗೆ ಸಂಬಂಧಿಸಿದಂತೆ ನನಗೆ, ಸೃಜನಶೀಲತೆ ಅನ್ನೋದು ಸ್ವಾಭಾವಿಕ ಪ್ರಕ್ರಿಯೆ ಹಾಗೂ ಮೌನದ ಆಚರಣೆಯ ನಡುವಿನ ನವಿರಾದ ನೃತ್ಯ ಅನಿಸುತ್ತೆ. ಕವಿತೆ ನನ್ನ ಮನೆ ಬಾಗಿಲಿಗೆ ಜೋರಾಗಿ ಘೋಷಣೆ